**ಪ್ರದಾನ ಸಿವಿಲ್ ಮತ್ತು  ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 91/2023**

| | | | |
|---|---|---|---|
| **ಹೆಸರು** | **:** | **ಪುಟ್ಟರಾಜ** | **ಚಾಸಾ. 5** |
| **ತಂದೆಯ ಹೆಸರು** | **:** | **ಶಿವರಾಮ** | **ಪ್ರಾ.ಸಾ. 3** |
| **ವಯಸ್ಸು** | **:** | **33 ವರ್ಷ** | **ದಿನಾಂಕಃ 11-11-2024** |
| **ಉದ್ಯೋಗ** | **:** | **ಅಬಕಾರಿ ಪೇದೆ** | |
| **ವಾಸಸ್ಥಳ** | **:** | **ಚಿತ್ತಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 07-11-2019 ರಿಂದ ಇಲ್ಲಿಯವರೆಗೆ ಅಬಕಾರಿ ಇಲಾಖೆ ಚಿತ್ತಾಪುರದಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ.

ದಿನಾಂಕಃ 23-02-2022 ರಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ನಾನು, ಚಾಸಾ-1 ಮತ್ತು ಚಾಸಾ-4 ರವರು ಚಿಂಚೋಳಿ ಪಟ್ಟಣದ ಗಸ್ತು ಕರ್ತವ್ಯದಲ್ಲಿ ಇರುವಾಗ ಚಾಸಾ-1ರವರಿಗೆ ಚಿಂಚೋಳಿ ಪಟ್ಟಣದ ಚಂದಾಪುರ ಗ್ರಾಮದಲ್ಲಿ ಅಕ್ರಮವಾಗಿ ಸೇಂಧಿ ಮಾರಾಟದ ಬಗ್ಗೆ ಬಾತ್ಮಿ ಬಂದಿದ್ದು ಅದನ್ನು ನಮಗೆ ತಿಳಿಸಿರುತ್ತಾರೆ. ಆಗ ನಾವು ಚಿಂಚೋಳಿಯ ಗಾಂಧಿ ವೃತ್ತದಿಂದ  ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಸಿ ಅವರಿಗೆ ಭಾತ್ಮಿ ಬಗ್ಗೆ ತಿಳಿಸಿ ಅವರು ಪಂಚರಾಗಲು ಒಪ್ಪಿ ಕೊಂಡ ಮೇರೆಗೆ ನಾನು, ಸಿಬ್ಬಂದಿಯಾದ ಚಾಸಾ-1 ಮತ್ತು 4ರವರು  ಹಾಗೂ ಪಂಚರು ಸೇರಿ ಭಾತ್ಮಿ ಸ್ಥಳಕ್ಕೆ  ಹೊರಟು ಮಧ್ಯಾಹ್ನ 2-15 ಗಂಟೆ ಸುಮಾರಿಗೆ ಭಾತ್ಮಿ ಸ್ಥಳಕ್ಕೆ ತಲುಪಿರುತ್ತೇವೆ. ಆಗ ನಮ್ಮನ್ನು ನೋಡಿ ನ್ಯಾಯಾಲಯದ ಮುಂದೆ ಇರುವ ಆರೋಪಿತಳು ತನ್ನ ಮನೆಯಿಂದ ಓಡಿ ಹೋಗಿರುತ್ತಾಳೆ. ಆಗ ನಾವು ಸ್ಥಳದಲ್ಲಿ ಇದ್ದ ವ್ಯಕ್ತಿಗಳಿಗೆ ಪಂಚರಾಗಲು ಕೇಳಿದಾಗ ಅವರು ಸಹಕರಿಸದೇ ಇರುವ ಕಾರಣ ನಮ್ಮ ಜೊತೆ ಬಂದ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1ರವರು ಶೋಧನ ಸಮುಚಿತ ಪತ್ರವನ್ನು ತಯಾರಿಸಿ ಸದರಿ ಮನೆಯನ್ನ ಶೋಧನೆ ಮಾಡಿದಾಗ ಅಲ್ಲಿ 20 ಲೀಟಃರ ಸಾಮರ್ಥದ 2 ಬಿಳಿ ಬಣ್ಣದ ಪ್ಲಾಸ್ಟಿಕ ಬಕೇಟನಲ್ಲಿ ಅಂದಾಜು 40 ಲೀಟರ ಕಲಬೇರಿಕೇ ಸೇಂಧಿ ದೊರೆತಿದ್ದು ಅದನ್ನು ಪಂಚರ ಸಮಕ್ಷಮ ಚಾಸಾ-1ರವರು ಜಪ್ತಿ ಮಾಡಿ ಅದರಲ್ಲಿ ರಾಸಾಯನಿಕ ಪರೀಕ್ಷೆಗಾಗಿ 1 ಲೀಟರ ಬಾಟಲಿನಲ್ಲಿ ಪ್ರತ್ಯಕೆವಾಗಿ ಜಪ್ತಿ ಮಾಡಿಕೊಂಡು ಮಧ್ಯಾಹ್ನ 2.30 ರಿಂದ 3.30ರವರೆಗೆ ಪಂಚನಾಮೆ ಜರುಗಿಸಿ ಚಿಂಚೋಳಿಯ ಅಬಕಾರಿಯ ಕಛೇರಿಗೆ ಬಂದು ಮುಂದಿನ ಕ್ರಮಕ್ಕಾಗಿ ಒಪ್ಪಿಸಿರುತ್ತಾರೆ.

ಈಗ ನೋಡುತ್ತಿರುವ ಒಂದು ಖಾಲಿ ಬಾಟಲನ್ನು ಸಾಕ್ಷಿ ನೋಡಿ ಇದರಲ್ಲಿ ರಾಸಾಯನಿಕ ಪರೀಕ್ಷೆಗಾಗಿ

ಕಲಬೇರಿಕೆ ಸೇಂಧಿಯನ್ನು ಜಪ್ತಿ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಸದರಿ ಖಾಲಿ ಬಾಟಲಿಯನ್ನ ಮು.ಮಾ-1 ಎಂದು ಗುರುತಿಸಲಾಗಿಯಿತು. ದಿನಾಂಕ 26-02-2022 ರಂದು ಪ್ರಕರಣದ ಕುರಿತು ನಾನು ಮತ್ತು ಚಾಸಾ-4 ರವರು ನನ್ನ ಮೇಲಾಧಿಕಾರಿಗಳಿಗೆ ಹೇಳಿಕೆಗಳನ್ನು ನೀಡಿದ್ದೇವೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ NCH ವಕೀಲರಿಂದಃ**

ಪಂಚರಾದ ಚಾಸಾ-2 ಮತ್ತು 3ರವರು ವೈನ ಶಾಪನಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-2 ಮತ್ತು 3ರವರು ಅಬಕಾರಿ ಪ್ರಕರಣಗಳಲ್ಲಿ ಖಾಯಂ ಪಂಚರು ಎಂದರೆ ಸರಿಯಲ್ಲ. ಚಿಂಚೋಳಿ ಅಥವಾ ಚಂದಾಪುರದಲ್ಲಿ ವೆಂಕಟೇಶ್ವರ ಕಾಲೋನಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತಳು ನನಗೆ ಮೊದಲಿನಿಂದ ಪರಿಚಯವಿಲ್ಲ. ಸ್ಥಳಿಯರಿಗೆ ಕೇಳಿದಾಗ ಆರೋಪಿತಳ ಹೆಸರು ಬಕ್ಕಮ್ಮ ಎಂದು ತಿಳಿಸಿರುತ್ತಾರೆ. ದಾಳಿ ಮಾಡಿದ ಮನೆ ಯಾರಿಗೆ ಸಂಬಂಧಪಟ್ಟದ್ದು ಎಂದು ಪ್ರಶ್ನಿಸಿದಾಗ ಸಾಕ್ಷಿ ದಾಖಲಾತಿಗಳನ್ನು ನೋಡಿಲ್ಲ ಆದರೆ ಸದರಿ ಮನೆಯಲ್ಲಿ ಆರೋಪಿತಳು ವಾಸ ಮಾಡುತ್ತಾಳೆ ಎಂದು ನುಡಿಯುತ್ತಾರೆ. ಆರೋಪಿತಳ ಬಗ್ಗೆ ತಿಳಿಸಿದ ಸ್ಥಳಿಯರು ಹೆಸರು ನನಗೆ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು ಮನೆಯಲ್ಲಿ ಸಿಕ್ಕ ವಿದ್ಯುತ ರಸೀದಿಯಲ್ಲಿ ಆರೋಪಿತಳ ಹೆಸರು ಉಲ್ಲೇಖವಿತ್ತು. ಸದರಿ ವಿದ್ಯುತ ರಸೀದಿಯನ್ನು ನಾನು ನೋಡಿಲ್ಲ. ಸದರಿ ವಿದ್ಯುತ ಬೀಲನ್ನು ಚಾಸಾ-1ರವರು ಜಪ್ತಿ ಮಾಡಿರುತ್ತಾರೆ. ಸದರಿ ವಿದ್ಯುತ ಬೀಲನ್ನು ಜಪ್ತಿ ಮಾಡಿರುವ ಬಗ್ಗೆ ನನ್ನ ಹೇಳಿಕೆಯಲ್ಲಿ ಉಲ್ಲೇಖವಿದೆ. ಸದರಿ ರಸೀದಿಯನ್ನು ಜಪ್ತಿ ಮಾಡಿ ಮುದ್ದೇ ಮಾಲು ಎಂದು ಪಡೆಯಲಿಲ್ಲ. ಸದರಿ ಎರಡು ಬಕೇಟಗಳನ್ನು ನಾವು ಜಪ್ತಿ ಮಾಡಿರುತ್ತೇವೆ.

ಮು.ಮಾ-1 ತರಹದ ಬಾಟಲಿ ಸಾಕಷ್ಟು ಸಿಗುತ್ತವೆ ಎಂದರೆ ಸರಿ. ಅಂಗಡಿಯಿಂದ ಖರೀದಿ ಮಾಡಿದ ಬಾಟಲಿಯನ್ನು ಈ ಪ್ರಕರಣದಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತಳ ಹೆಸರಿನಲ್ಲಿ ಚಿಂಚೋಳಿ ಅಥವಾ ಚಂದಾಪುರದಲ್ಲಿ ಯಾವುದೇ ಮನೆ ಇಲ್ಲ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ವಿಜಯಕುಮಾರ ಗಂಗನಪಳ್ಳಿರವರು ನನಗೆ ಗೊತ್ತಿಲ್ಲ. ವಿಜಯಕುಮಾರರವರಿಗೆ ಸಂಬಂಧಪಟ್ಟ ಮನೆ ಎಂದು ನಮಗೆ ಯಾರು ತಿಳಿಸಿರುವುದಿಲ್ಲ. ಆ ಸಮಯಕ್ಕೆ ವಿಜಯಕುಮಾರವರು ಚಿಂಚೋಳಿ ಪಟ್ಟದ ಕೌಂಸಿಲರರ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಜಯಕುಮಾರವರಿಗೆ ಉಳಿಸಲು ಆರೋಪಿತಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಈ ದಿನ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಮನೆ ಶೋಧನೆ ಮಾಡಲು 2 ರಿಂದ 3 ಗಂಟೆ ಬೇಕು ಎಂದರೆ ಸರಿ. ಆ ದಿನ ಶೋಧನೆ ಮಾಡಿ ವಿಚಾರಣೆ ಮಾಡಲು 10 ರಿಂದ 15 ನಿಮಿಷ ಬೇಕಾಯಿತು. ಶೋಧನ ಸಮುಚಿತ ವರದಿಯನ್ನು ಚಾಸಾ-1ರವರು ತಮ್ಮ ಕೈಬರಹದಿಂದ ಬರೆದಿರುತ್ತಾರೆ. ಸದರಿ ದಾಖಲೆಯನ್ನು ಬರೆಯಲು ಅಂದಾಜು 5 ನಿಮಿಷ ಬೇಕಾಯಿತು. ಸಾಮಾನ್ಯವಾಗಿ ವಿಚಾರಣೆ ಮಾಡಿ ಶೋಧನ ಪತ್ರ ಬರೆಯಲು 3 ಗಂಟೆ ಬೇಕಾಗುತ್ತದೆ ಎಂದರೆ

ಸರಿಯಲ್ಲ. ಮನೆಯನ್ನು ಶೊಧನೆ ಮಾಡಲು 2 ರಿಂದ 3 ಗಂಟೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮುದ್ದೆ ಮಾಲನ್ನು ಜಪ್ತಿ ಮಾಡಿ ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯಕವಾಗಿ ಜಪ್ತಿ ಮಾಡಿಕೊಳ್ಳಲು 2 ರಿಂದ 3 ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿ 1 ಗಂಟೆ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸ್ಥಳದಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಮುಗಿಸಲು 5 ರಿಂದ 6 ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿ 1 ಗಂಟೆಯಲ್ಲಿ ಮುಗಿಯುತ್ತದೆ ಎಂದು ನುಡಿಯುತ್ತಾರೆ.

ಯಾವುದೇ ದಾಳಿ ಮಾಡದೇ ಇದ್ದರು ಸಹ ಅಂಕೆ ಸಂಖ್ಯೆಗೊಸ್ಕರ ಆರೋಪಿತಳ ವಿರುದ್ದ ಸುಳ್ಳ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಯಾವ ಕಾರಣಕ್ಕಾಗಿ ಹೇಳಿಕೆ ನೀಡಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಆ ದಿನ ನನಗೆ ಕೇಳಿಲ್ಲ ಆದ್ದರಿಂದ ನಾನು ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ನಾನು ಹಾಗೂ ನನ್ನ ಮೇಲಾಧಿಕಾರಿಗಳು ಸೇರಿ ಸುಳ್ಳು ಕಥೆ ಸೃಷ್ಟಿಸಿ ಅದರ ಅನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರದಾನ ಪ್ರ.ದ.ನ್ಯಾ .ದಂ. ಚಿಂಚೋಳಿ**